# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಕಾರ್ಯಪಾಲಕ ಅಭಿಯಂತರ ರವರ ಕಛೇರಿ, ಕೋಡಿಚಿಕ್ಕನಹಳ್ಳಿ, ಮುಖ್ಯ ರಸ್ತೆ, ಬೆಳೇಕಹಳ್ಳಿ, ಬೆಂಗಳೂರು-76

ಸಂಖ್ಯೆ:ಸ.ಕಾ.ನಿ.ಅ/ಬೊ.ಉ/ಪಿಆರ್/ /2022-23 ದಿನಾಂಕ: ~~27.04.2022~~ 19-05-2022

## ಸಭಾ ಸೂಚನಾ ಪತ್ರ

ವಿಷಯ : ಹೊಂಗಸಂದ್ರ, ವಾರ್ಡ್ ಸಂಖ್ಯೆ: 189, ವಾರ್ಡ್ ಸಮಿತಿ ಸಭೆಯನ್ನು ಕರೆಯುವ ಬಗ್ಗೆ.

ಉಲ್ಲೇಖ: ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿ ರವರ ಪರಿಷ್ಕೃತ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)ಪಿ.ಆರ್/35/2020-21, ದಿನಾಂಕ: ದಿನಾಂಕ: 04.04.2022

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಮಾನ್ಯ ಮುಖ್ಯ ಆಯುಕ್ತ ರವರ ದಿನಾಂಕ: 04.04.2022 ಪರಿಷ್ಕೃತ ಕಛೇರಿ ಆದೇಶದಂತೆ ಶ್ರೀಮತಿ ಮಾಲತಿ (ಕಾರ್ಯಪಾಲಕ ಅಭಿಯಂತರರು ಬೃಹತ್ ನೀರುಗಾಲುವೆ) ರವರನ್ನು ವಾರ್ಡ್ ಸಂಖ್ಯೆ: 189 ಹೊಂಗಸಂದ್ರ ವಾರ್ಡ್‌ನ ಸಾರ್ವಜನಿಕರಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸಿ, ನೋಡಲ್ ಅಧಿಕಾರಿಯಾಗಿ ನೇಮಕಗೊಳಿಸಿರುತ್ತಾರೆ. ಇವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಬೇಗೂರು ಮುಖ್ಯ ರಸ್ತೆ, ವಾರ್ಡ್ ಕಛೇರಿ ಬೆಂಗಳೂರು-560068 ರಲ್ಲಿ ದಿನಾಂಕ: 21.05.2022 ರಂದು ಶನಿವಾರ ಸಮಯ ಮಧ್ಯಾಹ್ನ 2.30 ಘಂಟೆಗೆ ನಿಯೋಜಿಸಲಾಗಿದೆ.

ಆದ್ದರಿಂದ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಯ ಅಧಿಕಾರಿಗಳು, ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳ ಪ್ರತಿನಿಧಿಗಳು ಮತ್ತು ವಾರ್ಡ್ ಸದಸ್ಯರು ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶ್ವಸಿಗೊಳಿಸಲು ಕೋರಿದೆ.

### -:ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:-

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ವರದಿ ಮಾಡುವುದು.
2. ಘನತ್ಯಾಜ್ಯ ನಿರ್ವಹಣೆ ಮತ್ತು ನಾಗರೀಕರ ಕುಂದುಕೊರತೆಗಳ ಚರ್ಚೆ ಹಾಗೂ ನೋಡಲ್ ಅಧಿಕಾರಿಗಳ ಆದೇಶದ ಮೇರೆಗೆ ಇತರೆ ಚರ್ಚೆ.
3. ವಾರ್ಡ್ ರಸ್ತೆಗಳ ನಿರ್ವಹಣೆ ಬಗ್ಗೆ.
4. ಮಳೆಗಾಲದಲ್ಲಿ ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳ ಬಗ್ಗೆ.
5. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಚರ್ಚೆ.
6. ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ಮರಗಳನ್ನು ತೆರವುಗೊಳಿಸುವ ಮತ್ತು ಮುಂಜಾಗ್ರತ ಬಗ್ಗೆ ಚರ್ಚೆ.
7. ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನಗಳ ನಿರ್ವಹಣೆ ಬಗ್ಗೆ
8. ವಾರ್ಡ್‌ಗಳಲ್ಲಿ ಜರಗಿರುವ ಕಾಮಗಾರಿಗಳ ಬಗ್ಗೆ.
9. ತೆರಿಗೆ ವಸೂಲಾತಿ ಕುರಿತು ಚರ್ಚಿಸುವ ಬಗ್ಗೆ.
10. ಅನಧಿಕೃತ ಫ್ಲೆಕ್ಸ್ / ಬ್ಯಾನರ್ ತೆರವುಗೊಳಿಸಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ.
11. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ/ ಮಳೆ ನೀರಿನ ಸಮಸ್ಯೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಸ್ಕಾಂ, ಕೈಗೆತ್ತಿಕೊಂಡಿರುವ ಕಾಮಗಾರಿಗಳ ಚರ್ಚೆ.
12. ಕೋವಿಡ್-19 ಸಾಂಕ್ರಮಿಕ ರೋಗದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳ ಬಗ್ಗೆ
13. ಇತರೆ ವಿಚಾರಗಳು.

ಸಹಿ/-

ಶ್ರೀಮತಿ ಮಾಲತಿ ನೋಡಲ್ ಅಧಿಕಾರಿ,
ವಾರ್ಡ್ ಸಂಖ್ಯೆ: 189, ಹೊಂಗಸಂದ್ರ

ಕಾರ್ಯದರ್ಶಿ/ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: ನಂ.189, ಹೊಂಗಸಂದ್ರ,

Scanned with